ಓ.ಎಸ್. ನಂ. 160/2018

ಪಿ.ಡಬ್ಲ್ಯು: 02(ಸಣ್ಣ ಹುಲುಗಪ್ಪ)

ದಿನಾಂಕಃ 20.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ವಾದಿ ಮೃತಪಟ್ಟು 2 ವರ್ಷ ಆಗಿರುತ್ತದೆ. ಆತ ಮೃತಪಟ್ಟಾಗ ಆತನಿಗೆ 75 ವರ್ಷ ಇರಬಹುದು. ಸಿ.ಡಬ್ಲ್ಯು:- 01 ರವರ ಹೆಸರು ದುರುಗಪ್ಪ. ಅವರ ತಾಯಿಯ ಹೆಸರು ಒಡ್ಡಿನಕಟ್ಟಿ ಹಾಲಮ್ಮ ಆಗಿರುತ್ತದೆ. ವಡ್ಡಿನಕಟ್ಟಿ ಹಾಲಮ್ಮಳ ತಂದೆಯ ಹೆಸರು ವಡ್ಡಿನಕಟ್ಟಿ ಭೀಮಪ್ಪ ಎಂದರೆ ಇರಬಹುದು. ವಡ್ಡಿನಕಟ್ಟಿ ಎಂಬುದು ದುರುಗಪ್ಪ ಅವರ ತಾಯಿಯ ವಂಶದ ಹೆಸರು ಎಂದರೆ ಸರಿ. ವಾದಿಯವರು ಕಾವಲಿ ವಂಶ ಎಂದರೆ ಸರಿ. ವಡ್ಡಿನಕಟ್ಟಿ ಹಾಲಮ್ಮ ದೇವದಾಸಿ ಎಂದರೆ ಸರಿ. ಆಕೆ ದೇವದಾಸಿ ಇದ್ದಾಗ ದುರುಗಪ್ಪ ಮತ್ತು ಸೊಲ್ಲಪ್ಪ ಹುಟ್ಟಿರುತ್ತಾರೆ ಎಂದರೆ ಸರಿ. ನಾನು ಹಾಕಿರುವ ಪ್ರಮಾಣ ಪತ್ರಕ್ಕೆ ಮಾಹಿತಿ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಡ್ಡಿನಕಟ್ಟಿ ಹಾಲಮ್ಮ ಹಾಗೂ ವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಾನು ಹೀಗಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಹಾಗೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.